ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

ದಿನಾಂಕ : 19 AUG 2022

ಕವಿಪ್ರನಿನಿ/ಬಿ9/39331/16-17

## ಸುತ್ತೋಲೆ

ವಿಷಯ:- ಸಾರ್ವಜನಿಕ ಸಂಗ್ರಹಣೆಯಲ್ಲಿ ಟೆಂಡರ್ ಲಾಭಾಂಶ (Tender Premium) ಅನ್ನು ಶೇ.5 ಕ್ಕೆ ಮಿತಿಗೊಳಿಸುವ ಕುರಿತು ಸ್ಪಷ್ಟೀಕರಣ.

ಉಲ್ಲೇಖ:-
1. ಸರ್ಕಾರದ ಸುತ್ತೋಲೆ ಸಂಖ್ಯೆ: ಪಿಡಬ್ಲ್ಯೂಡಿ 1359 SOFC 2001 (ಪಿ-2), ದಿನಾಂಕ 03/12/2002.
2. ಸರ್ಕಾರದ ಸುತ್ತೋಲೆ ಸಂಖ್ಯೆ: ಆ.ಇ 128 ವೆಚ್ಚ-12/2021 ದಿನಾಂಕ 10/05/2022.
3. ಕವಿಪ್ರನಿನಿ ಸುತ್ತೋಲೆ ಸಂಖ್ಯೆ: ಬಿ9/39331/16-17 ದಿನಾಂಕ 25/07/2022.
4. ಕವಿಪ್ರನಿನಿ ಸುತ್ತೋಲೆ ಸಂಖ್ಯೆ: ಬಿ19/7625/86-87/ಸಂ-6 ದಿನಾಂಕ 25/07/2022.
5. ಸರ್ಕಾರದ ಸುತ್ತೋಲೆ ಸಂಖ್ಯೆ: ಆ.ಇ 128 ವೆಚ್ಚ-12/2021 ದಿನಾಂಕ 30/07/2022.
6. ಕವಿಪ್ರನಿನಿ ಸುತ್ತೋಲೆ ಸಂಖ್ಯೆ: ಬಿ19/7625/86-87/ಸಂ-6 ದಿನಾಂಕ 03/08/2022.

* * * * * * * * *

ಉಲ್ಲೇಖ (1) ರ ಸರ್ಕಾರದ ಸುತ್ತೋಲೆಯಲ್ಲಿ ಟೆಂಡರ್‌ನಲ್ಲಿ ಸ್ವೀಕೃತವಾದ ದರಗಳು ಅಂದಾಜು ಮೊತ್ತಕ್ಕಿಂತ ಶೇ.10 ಕ್ಕಿಂತ ಹೆಚ್ಚಾಗಿದ್ದಲ್ಲಿ, ಅದನ್ನು ಗಣನೀಯ ಹೆಚ್ಚುವರಿ (substantially high) ಟೆಂಡರ್ ಎಂದು ಪರಿಗಣಿಸಲು ಮತ್ತು ಅಂತಹ ಸಂದರ್ಭದಲ್ಲಿ ಎಲ್ಲಾ ಟೆಂಡರ್‌ಗಳನ್ನು ರದ್ದುಪಡಿಸಿ ಮರುಟೆಂಡರ್ ಕರೆಯುವುದು ಪ್ರಥಮ ಆಯ್ಕೆಯಾಗಿರಬೇಕೆಂದು ತಿಳಿಸಲಾಗಿದೆ. ಆದಾಗ್ಯೂ, ಹಲವಾರು ಸಂಗ್ರಹಣಾ ಪ್ರಾಧಿಕಾರಿಗಳು (Procurement entities) ಪ್ರಸಕ್ತ ಶೇ.10 ಮತ್ತು ಅದಕ್ಕಿಂತ ಹೆಚ್ಚಿನ ದರಗಳಿಗೆ ಟೆಂಡರ್ ಅನುಮೋದಿಸುತ್ತಿದ್ದ ಹಿನ್ನೆಲೆಯಲ್ಲಿ ಉಲ್ಲೇಖ (2) ರ ಸರ್ಕಾರದ ಸುತ್ತೋಲೆಯಲ್ಲಿ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಅಂದಾಜು ಮೊತ್ತದ ಮೇಲೆ ಶೇ.5 ಕ್ಕಿಂತ ಹೆಚ್ಚಿನ ಲಾಭಾಂಶವುಳ್ಳ (Tender Premium) ಟೆಂಡರ್‌ನ್ನು ಯಾವುದೇ ಕಾರಣಕ್ಕೂ ಅಂಗೀಕರಿಸತಕ್ಕದ್ದಲ್ಲವೆಂದು ತಿಳಿಸಲಾಗಿದೆ. ಒಂದು ವೇಳೆ ಶೇ.5 ಕ್ಕಿಂತ ಹೆಚ್ಚಿನ ಮೊತ್ತದ ಲಾಭಾಂಶವುಳ್ಳ ಟೆಂಡರ್‌ನ್ನು ಅಂಗೀಕರಿಸಬಯಸಿದ್ದಲ್ಲಿ, ಸಮರ್ಥನೀಯ ಕಾರಣಗಳನ್ನು ಲಿಖಿತ ರೂಪದಲ್ಲಿ ದಾಖಲಿಸಿ, ಉನ್ನತ ಪ್ರಾಧಿಕಾರದ ಅನುಮೋದನೆ ಪಡೆದು ಅಂಗೀಕರಿಸತಕ್ಕದ್ದೆಂದು ಉಲ್ಲೇಖ (2) ರ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ ಮತ್ತು ನಿಯಮಗಳನ್ನು ನಿಗಮದ ಎಲ್ಲಾ ಸಂಗ್ರಹಣಾ ಪ್ರಾಧಿಕಾರಿಗಳು ಉಲ್ಲೇಖ (2) ರ ಸುತ್ತೋಲೆಯನ್ನು ಒಳಗೊಂಡಂತೆ ಕಟ್ಟುನಿಟ್ಟಾಗಿ ಪಾಲಿಸುವಂತೆ ಉಲ್ಲೇಖ (3) ರ ನಿಗಮದ ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಮುಂದುವರೆದಂತೆ, ನಿಗಮದ ವತಿಯಿಂದ ಕರೆಯಲ್ಪಡುವ ಎಲ್ಲಾ ಟೆಂಡರ್‌ಗಳಿಗೆ (ಠೇವಣಿ ವಂತಿಕೆ ಕಾಮಗಾರಿಗಳೂ ಒಳಗೊಂಡಂತೆ) ಅನ್ವಯವಾಗುವಂತೆ ಉಲ್ಲೇಖ (2) ರ ಸುತ್ತೋಲೆಯನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಲು ಹಾಗೂ ಠೇವಣಿ

ವಂತಿಕೆ ಕಾಮಗಾರಿಗಳ (Deposit Contribution Works) ಅಂದಾಜುಪಟ್ಟಿಯನ್ನು ಸಿದ್ದಪಡಿಸುವಾಗ ಟೆಂಡರ್ ಲಾಭಾಂಶ (Tender Premium) ಮೊತ್ತವನ್ನು ಶೇ.10 ರ ಬದಲಾಗಿ ಶೇ.5 ಎಂದು ಪರಿಗಣಿಸಲು ಹಾಗೂ ಅಂದಾಜುಪಟ್ಟಿಯ ನಮೂನೆಯಲ್ಲಿ (Abstract) ರಲ್ಲಿ ತಿದ್ದುಪಡಿ ಮಾಡಿಕೊಳ್ಳಲು ಉಲ್ಲೇಖ (4) ರ ಸುತ್ತೋಲೆಯಲ್ಲಿ ತಿಳಿಸಲಾಗಿತ್ತು.

ಠೇವಣಿ ವಂತಿಕೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಟೆಂಡರ್ ಲಾಭಾಂಶ (Tender Premium) ಮೊತ್ತವನ್ನು ಶೇ.10 ರಂತೆ ಮುಂದುವರೆಸುವುದು ಹಾಗೂ ದಿನಾಂಕ 06/08/2021 ರ ನಿಗಮದ ಸುತ್ತೋಲೆಯಲ್ಲಿ ಠೇವಣಿ ವಂತಿಕೆ ಕಾಮಗಾರಿಗಳಿಗೆ ನೀಡಿರುವ ಅಂದಾಜುಪಟ್ಟಿಯ ನಮೂನೆಯನ್ನು (Abstract) ನ್ನು ಮುಂದುವರೆಸುವುದು ಸೂಕ್ತವೆಂದು ನಿರ್ಣಯಿಸಲಾಯಿತು.

ಮುಂದುವರೆದಂತೆ, ಉಲ್ಲೇಖ (5) ರ ಸರ್ಕಾರದ ಸುತ್ತೋಲೆಯಲ್ಲಿ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಟೆಂಡರ್ ಲಾಭಾಂಶವನ್ನು ಶೇ.5 ಕ್ಕೆ ಮಿತಿಗೊಳಿಸುವ ಸಂಬಂಧ ನೀಡಲಾದ ಸ್ಪಷ್ಟೀಕರಣದಲ್ಲಿ, ಈ ರೀತಿಯ ಟೆಂಡರ್ ಪ್ರೀಮಿಯಂ ನ್ನು ದಿನಾಂಕ 10/05/2022 ರಂದು ಚಾಲ್ತಿಯಲ್ಲಿದ್ದ ಅನುಸೂಚಿ ದರಗಳಿಗೆ ಅನುಗುಣವಾಗಿ ಇಂದೀಕರಿಸಿದ ಅಂದಾಜಿನ (Updated CSR as on 10/05/22) ಮೇಲೆ ಪರಿಗಣಿಸಲು ತಿಳಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ಸಾರ್ವಜನಿಕ ಸಂಗ್ರಹಣೆಯಲ್ಲಿ ಟೆಂಡರ್ ಲಾಭಾಂಶ (Tender Premium) ಸಂಬಂಧ ಉಲ್ಲೇಖ (4) ಮತ್ತು ಉಲ್ಲೇಖ (6) ರ ನಿಗಮದ ಸುತ್ತೋಲೆಗಳನ್ನ ಹಿಂಪಡೆಯುತ್ತಾ, ಈ ಕೆಳಕಂಡ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲಾಗಿದೆ.

1. ನಿಗಮದ ಎಲ್ಲಾ ಸಂಗ್ರಹಣೆಗಳಲ್ಲಿ ಅಂದಾಜು ಮೊತ್ತದ ಮೇಲೆ ಶೇ.5 ಕ್ಕಿಂತ ಹೆಚ್ಚಿನ ಲಾಭಾಂಶವುಳ್ಳ (Tender Premium) ಟೆಂಡರ್‌ನ್ನು ಯಾವುದೇ ಕಾರಣಕ್ಕೂ ಅಂಗೀಕರಿಸತಕ್ಕದ್ದಲ್ಲ ಹಾಗೂ ಒಂದು ವೇಳೆ ಶೇ.5 ಕ್ಕಿಂತ ಹೆಚ್ಚಿನ ಮೊತ್ತದ ಲಾಭಾಂಶವುಳ್ಳ ಟೆಂಡರ್‌ನ್ನು ಅಂಗೀಕರಿಸಬಯಸಿದ್ದಲ್ಲಿ, ಸಮರ್ಥನೀಯ ಕಾರಣಗಳನ್ನು ಲಿಖಿತ ರೂಪದಲ್ಲಿ ದಾಖಲಿಸಿ, ಉನ್ನತ ಪ್ರಾಧಿಕಾರದ ಅನುಮೋದನೆ ಪಡೆದು ಅಂಗೀಕರಿಸುವುದು.
2. ಈ ರೀತಿಯ ಟೆಂಡರ್ ಲಾಭಾಂಶ (Tender Premium) ನ್ನು ಹಾಲಿ ಚಾಲ್ತಿಯಲ್ಲಿರುವ ಸರ್ಕಾರದ/ನಿಗಮದ ಅನುಸೂಚಿ ದರಗಳಿಗೆ ಅನುಗುಣವಾಗಿ ಇಂದೀಕರಿಸಿದ ಅಂದಾಜಿನ (Updated CSR) ಮೇಲೆ ಪರಿಗಣಿಸುವುದು.
3. ನಿಗಮದಿಂದ ಕೈಗೊಳ್ಳುವ ಠೇವಣಿ ವಂತಿಕೆ ಕಾಮಗಾರಿಗಳ (Deposit Contribution Works) ಅಂದಾಜುಪಟ್ಟಿಯನ್ನು ಸಿದ್ದಪಡಿಸುವಾಗ ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ19/7625/86-87/ಸಂ-6 ದಿನಾಂಕ 06/08/2021 ರಲ್ಲಿ ತಿಳಿಸಿದಂತೆ, ಅಂದಾಜುಪಟ್ಟಿಯ ನಮೂನೆ (Abstract) ರಲ್ಲಿ ನಿಗದಿಪಡಿಸಿರುವಂತೆ, ಟೆಂಡರ್ ಲಾಭಾಂಶ (Tender Premium) ನ್ನು ಶೇ.10 ರಂತೆ ಮುಂದುವರೆಸುವುದು.

BR 8/8/22

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕವಿಪ್ರನಿನಿ, ಬೆಂಗಳೂರು.

**ಪ್ರತಿಗಳು:-**

1. ಎಲ್ಲಾ ಮುಖ್ಯ ಇಂಜಿನಿಯರುಗಳು (ವಿ), ಕವಿಪ್ರನಿನಿ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
3. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ)/ (ಸಿವಿಲ್), ಕವಿಪ್ರನಿನಿ.
5. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
6. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು – ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ)/ (ಸಿವಿಲ್), ಕವಿಪ್ರನಿನಿ.
8. ಎಲ್ಲಾ ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
9. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಆ ಮತ್ತು ಮಾ. ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
10. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ಗಳು (ವಿ)/(ಸಿವಿಲ್), ಕವಿಪ್ರನಿನಿ.
11. ಎಲ್ಲಾ ಲೆಕ್ಕಾಧಿಕಾರಿಗಳು, ಕವಿಪ್ರನಿನಿ.
12. ಲೆಕ್ಕಾಧಿಕಾರಿ (ಕೋಡೀಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.